
# ನಾಂದಿಪದ

# ಊರೇ ಊರುಗೋಲು

ಲೇಖಕನೊಬ್ಬ ತನ್ನ ಕಥಾನಕಗಳಲ್ಲಿ ಸೃಷ್ಟಿಸಿದ ಊರು ವಾಸ್ತವದ ಹೆಸರನ್ನು ಹೊಂದಿದ್ದರೂ ಅದು ಕಾಲ್ಪನಿಕವೇ. ಪ್ರಾದೇಶಿಕ ವಿವರಗಳಿಂದ, ಭಾಷೆಯಿಂದ ಕಥನವೊಂದರ ಊರು ಅದೇ ಹೆಸರಿನ ಊರು ಆಗಲಾರದು. ಕನ್ನಡ ಲೇಖಕರ ಹೆಸರಿನೊಂದಿಗೆ ಸೇರಿಕೊಂಡಿರುವ ಊರುಗಳನ್ನು ಗಮನಿಸಿ. ಕೋಟ, ಮಾಸ್ತಿ, ಕುಪ್ಪಳಿ, ಗೊರೂರು, ಬೊಳುವಾರು, ಕಟ್ಪಾಡಿ, ದೇವನೂರು, ಬರಗೂರು, ಹಂದ್ರಾಳ, ಬಾಡ ಹೀಗೆ ಬೆಳೆಯುತ್ತಲೇ ಹೋಗುತ್ತದೆ. ಇನ್ನು ಕೆಲವು ಊರುಗಳು ಸಾಹಿತ್ಯದಲ್ಲಿ ತಮ್ಮನ್ನು ಗಾಢವಾಗಿ ರೇಖಿಸಿದ ಆಯಾ ಲೇಖಕರ ಹೆಸರನ್ನೆ ಮುನ್ನೆಲೆಗೆ ತರುವಷ್ಟು ಪ್ರಭಾವಶಾಲಿಯಾಗಿವೆ. ಹನೇಹಳ್ಳಿ, ಮೂಡಿಗೆರೆ, ಕಲ್ಲಹಳ್ಳಿ, ಮೇಲುಕೋಟೆ, ಬೆಸಗರಹಳ್ಳಿ, ಗೋಕರ್ಣ – ಈ ಎಲ್ಲ ಹೆಸರುಗಳನ್ನು ಯಾವುದೋ ಬಸ್‌ನಿಲ್ದಾಣದಲ್ಲಿ ಕೇಳಿದಂತೆ ಅನ್ನಿಸಬಹುದು. ಆದರೆ, ಅವು ಆಯಾ ಲೇಖಕರು ಸೃಜಿಸಿದ ಲೋಕದ ಯಾನಕ್ಕೆ ಆರಂಭ ಬಿಂದುಗಳು ಎಂಬುದನ್ನು ಮರೆಯ ಕೂಡದು.

ಇವೆಲ್ಲ ಕನ್ನಡ ಸಾಹಿತ್ಯವನ್ನು ಬೆಳಗಿದ, ಬೆಳೆಸಿದ ಊರುಗಳೇ. ಊರೇ ಇಲ್ಲದ ಲೇಖಕರ ಕಥನಗಳನ್ನು ಊಹಿಸಲೂ ಆಗುವುದಿಲ್ಲ. ಹಾಗೆಯೇ ನಮ್ಮೆಲ್ಲರ ಬದುಕನ್ನೂ ಸಹ. ಹಳ್ಳಿಯಾಗಲಿ, ಪಟ್ಟಣವಾಗಲಿ ವ್ಯಕ್ತಿಗೆ ಒಂದು ಗುರುತನ್ನು, ಬದುಕನ್ನು ಕೊಡುವುದರಿಂದ ಅವು ಎಲ್ಲರ ವ್ಯಕ್ತಿತ್ವದ, ನೆನಪುಗಳ ಭಾಗವೇ ಆಗಿರುತ್ತವೆ. ನೆನಪುಗಳ ಭಾರ ಮನುಷ್ಯನಿಗಿದೆಯೇ ಹೊರತು, ಊರಿಗಿಲ್ಲ. ತಮ್ಮದೆನ್ನುವ ಊರೇ ಇಲ್ಲದ ಅಲೆಮಾರಿಗಳ ಮನಸ್ಸು ಎಲ್ಲಿಯೂ ಇರಲಾಗದ ತಳಮಳ, ವೇದನೆಯಿಂದ ಕೂಡಿರಬಹುದು.

ವಲಸಿಗರಿಗೆ ತಮ್ಮ ಮೂಲಸ್ಥಳಗಳು ಯಾವತ್ತಿಗೂ ಕೊನೆಯ ನೆಲೆಗಳಾಗಿರುತ್ತವೆ. ಗಂಜಿ ಕುಡಿದಾದರೂ ಬದುಕೇನು ನಮ್ಮೂರೆ ನಮಗೆ ಚಂದವೋ ಎಂದು ಕಷ್ಟಕಾಲದಲ್ಲಿ, ನೆಮ್ಮದಿ ಅರಸಿ ತಮ್ಮ ಊರುಗಳಿಗೆ ಮರಳುತ್ತಾರೆ. ಈ ಮರಳುವಿಕೆಯ ಹಿಂದಿರುವುದು ಆ ಮಣ್ಣಿನ ಮೇಲಿನ ಮೋಹ, ನಂಬಿಕೆಯೇ. ಆ ಮಣ್ಣು ಬಾಲ್ಯದಲ್ಲಿ ಅವರ ಭಾವಕೋಶವನ್ನು ಸೃಷ್ಟಿಸಿರುತ್ತದೆ, ಜೀವನದೃಷ್ಟಿಯನ್ನು ರೂಪಿಸಿರುತ್ತದೆ, ಬಾಳಿಗೆ ಬೇಕಾದ ಜೀವದ್ರವ್ಯವನ್ನು ಕೊಟ್ಟಿರುತ್ತದೆ. ಆದ್ದರಿಂದಲೇ ಅನೇಕರು ತಾವು ಬೇರುಬಿಟ್ಟ ಜಾಗದಿಂದ ಕೊನೆಯವರೆಗೂ ಕದಲುವುದೇ ಇಲ್ಲ. ಅವರನ್ನು ಬಂಧಿಸಿರುವ ಭಾವದ ತಂತುಗಳು ಅವರನ್ನು ಅಲ್ಲಿಂದ ಗಡಿಪಾರಾಗದಂತೆ ತಡೆದಿರುತ್ತವೆ. ಹೀಗಾಗಿಯೇ ನಮ್ಮ ಲೇಖಕರು ತಮ್ಮ ಬರವಣಿಗೆಯ ಸ್ವರೂಪವನ್ನು, ಆವರಣವನ್ನು ನಿರ್ಧರಿಸಿರುವ ಬಾಲ್ಯಕ್ಕೆ, ಆ ಮೂಲಕ ತಾವು ಹುಟ್ಟಿ ಬೆಳೆದ ಪ್ರದೇಶಗಳಿಗೆ ತಮ್ಮ ಸಾಹಿತ್ಯದಲ್ಲಿ ಆಗಾಗ ಹಿಂತಿರುಗುತ್ತಲೇ ಇರುತ್ತಾರೆ. ಅವರದು ಮಾತ್ರವಲ್ಲ, ಊರು ಎಲ್ಲರ ಊರುಗೋಲಾಗಿರುತ್ತದೆ; ಎಲ್ಲರನ್ನೂ ಆಧರಿಸಿ, ಮುನ್ನಡೆಸುತ್ತಲೇ ಇರುತ್ತದೆ.


ಕಲೆ: ವೆಂಕಟ್ರಮಣ ಭಟ್

ಈ ಸಂಚಿಕೆಯಲ್ಲಿ ಕತೆಗಾರ ಶ್ರೀಧರ ಬಳಗಾರರ ಸಂದರ್ಶನವಿದೆ. ಯಲ್ಲಾಪುರದ ಬಳಗಾರ ಊರಿನವರಾದ ಶ್ರೀಧರರು ತಮ್ಮಿಂದ ಕತೆಗಳನ್ನು ಬರೆಸಿದ ತಮ್ಮ ಊರಿನ ಬಗ್ಗೆ ಮಾತನಾಡಿದ್ದಾರೆ. ಊರುಗಳ ಬಗೆಗಿರುವ ತಮ್ಮ ಪ್ರೀತಿಯನ್ನು ಸಿಂಧಿ ಲೇಖಕ ವಾಸ್‌ದೇವ್ ಮೋಹಿ ಈ ಸಂಚಿಕೆಯಲ್ಲಿರುವ ತಮ್ಮ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ. ಈ ಸಂದರ್ಶನಗಳ ಜೊತೆಗೆ ಭಿನ್ನ ಧಾಟಿ, ಶೈಲಿಯ ಬರಹಗಳನ್ನು ಕೊಡಲಾಗಿದೆ.

**ಸಂದೀಪ ನಾಯಕ**